# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103
ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ: ತುವಿ:ಶೈವಿ:PG:2022-23/3038

ದಿನಾಂಕ: 07.09.2022

**ಸುತ್ತೋಲೆ**

ವಿಷಯ: ಎಲ್ಲಾ ಸ್ನಾತಕೋತ್ತರ ವಿಭಾಗಗಳಿಂದ ಅಧ್ಯಯನ ಪ್ರವಾಸ / ಶೈಕ್ಷಣಿಕ ಪ್ರವಾಸ / ಕ್ಷೇತ್ರ ಕಾರ್ಯ / ಕೈಗಾರಿಕಾ ಭೇಟಿಗಳಿಗೆ ಅನುಮತಿ ಹಾಗೂ ಮುಂಗಡ ಹಣ ಕೋರಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 06.09.2022 (ಕಂಡಿಕೆ:69)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಂದ ಅಧ್ಯಯನ ಪ್ರವಾಸ / ಶೈಕ್ಷಣಿಕ ಪ್ರವಾಸ / ಕ್ಷೇತ್ರ ಕಾರ್ಯ / ಕೈಗಾರಿಕಾ ಭೇಟಿಗಳಿಗೆ ಅನುಮತಿ ಹಾಗೂ ಮುಂಗಡ ಹಣ ಮಂಜೂರು ಮಾಡಬೇಕೆಂದು ಕೋರಿ ಅನೇಕ ಮನವಿಗಳನ್ನು ಸಲ್ಲಿಸಿರುತ್ತೀರಿ.

ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಂದ ಅಧ್ಯಯನ ಪ್ರವಾಸ / ಶೈಕ್ಷಣಿಕ ಪ್ರವಾಸ / ಕ್ಷೇತ್ರ ಕಾರ್ಯ / ಕೈಗಾರಿಕಾ ಭೇಟಿಗಳಿಗೆ ಅನುಮತಿ ನೀಡುವ ಕುರಿತು ವಿಭಾಗದ ಮುಖ್ಯಸ್ಥರ ನೇರ ಹೊಣೆಗಾರಿಕೆಯೊಂದಿಗೆ ವಿಶ್ವವಿದ್ಯಾನಿಲಯದಿಂದ ಯಾವುದೇ ಆರ್ಥಿಕ ಹೊರೆಯಿಲ್ಲದಂತೆ ಈ ಮೂಲಕ ಅನುಮತಿಸಿದೆ.

ಮುಂದುವರೆದು, ಇನ್ನು ಮುಂದೆ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಂದ ಅಧ್ಯಯನ ಪ್ರವಾಸ / ಶೈಕ್ಷಣಿಕ ಪ್ರವಾಸ / ಕ್ಷೇತ್ರ ಕಾರ್ಯ / ಕೈಗಾರಿಕಾ ಭೇಟಿಗಳಿಗೆ ತೆರಳಲು ಆರ್ಥಿಕವಾಗಿ ಮುಂಗಡ ಹಣವನ್ನು ಕೋರುವ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು / ಸಂಯೋಜಕರು ಕನಿಷ್ಠ 20 ಕಚೇರಿ ದಿನಗಳು ಮುಂಚಿತವಾಗಿ ಮನವಿ ಸಲ್ಲಿಸಿದಲ್ಲಿ ವಿಶ್ವವಿದ್ಯಾನಿಲಯದ ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ಈ ಮೂಲಕ ತಿಳಿಸಿದೆ.

**ಸೂಚಿಸಿರುವ ಕಾರ್ಯಕ್ರಮಗಳು ಮುಕ್ತಾಯವಾದ ನಂತರ ಕೆಳಕಂಡ ಮಾಹಿತಿಗಳನ್ನು ಶೈಕ್ಷಣಿಕ ವಿಭಾಗಕ್ಕೆ ಮಾಹಿತಿಗಾಗಿ** ಸಲ್ಲಿಸುವುದು.

1. ಸದರಿ ಕಾರ್ಯಕ್ರಮದ ಬಗ್ಗೆ ವರದಿಯನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ಸಲ್ಲಿಸುವುದು.
2. ಸದರಿ ಕಾರ್ಯಕ್ರಮದ ಫಲಾನುಭಾವಿಗಳ **Beneficiaries** ಹೆಸರು ಮತ್ತು ಸಂಖ್ಯೆಗಳ ಪಟ್ಟಿಯನ್ನು ಸಲ್ಲಿಸುವುದು.
3. ಸದರಿ ಕಾರ್ಯಕ್ರಮಕ್ಕೆ ತೆರಳುವ ವಿದ್ಯಾರ್ಥಿಗಳಿಂದ **Student feed back** ಪಡೆದು ಸಲ್ಲಿಸುವುದು.
4. ಸದರಿ ಕಾರ್ಯಕ್ರಮದ ಕುರಿತು ಹಣಕಾಸು ವಿಭಾಗಕ್ಕೆ ಸಲ್ಲಿಸುವ ಹುಂಡಿಗಳ ಪ್ರತಿಗಳನ್ನು ಶೈಕ್ಷಣಿಕ ವಿಭಾಗದ ಗಮನಕ್ಕೆ ಸಲ್ಲಿಸುವುದು.
5. ಸದರಿ ಕಾರ್ಯಕ್ರಮಕ್ಕೆ ತೆರಳುವ ವಿದ್ಯಾರ್ಥಿಗಳ ಪೋಷಕರುಗಳಿಂದ ಮುಚ್ಚಳಿಕೆ ಪತ್ರವನ್ನು ಪಡೆಯುವುದು.
6. ಸದರಿ ಕಾರ್ಯಕ್ರಮ ತೆರಳುವ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪ್ರವಾಸದ ಅವಧಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸುವುದು.

ಆದೇಶದ ಮೇರೆಗೆ

Mangalahonnur

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ

ಗೆ,

1. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಂಯೋಜಕರು, ಶಿರಾ ಸ್ನಾತಕೋತ್ತರ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಂಯೋಜಕರು, ಸ್ನಾತಕೋತ್ತರ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ಭುವನಹಳ್ಳಿ, ಶಿರಾ – 572 139.
5. ಸಂಯೋಜಕರು, ಸ್ನಾತಕೋತ್ತರ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತಿಪಟೂರು – 572 201.

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಈ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
4. ಕಚೇರಿ ಪ್ರತಿ.